ಮ್ಯಾನೇಜರ್ ಆಗಿರುವ ಶ್ರೀ ಸುರೇಂದ್ರ ರೈ ಎನ್ನುವವರನ್ನು ಒಂದು ಟೆಂಪೋ ಟ್ರಾಲರ್‌ನಲ್ಲಿ ಅಟ್ಟಿಸಿಕೊಂಡು ಬಂದು ದುರ್ಷ್ಮಿಗಳು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದು ಒಂದು ಅಂಶ. ಮತ್ತು ಹೋದವರ್ಷ ಇದೇ ರೀತಿಯಲ್ಲಿ ಕಾರಿನಲ್ಲಿ ಬಂದು ಪ್ರಯಾಣಿಕರನ್ನು ದರೋಡೆ ಮಾಡುತ್ತಾ ಇರತಕ್ಕಂಥಾದ್ದು ಈ ರೀತಿಯ ಪ್ರಕರಣಗಳು ಜಾಸ್ತಿಯಾಗಿದೆ. ಅಲ್ಲಿ ಈಗ ಒಬ್ಬ ಎ. ಎಸ್. ಐ. ಒಬ್ಬ ದಫೇದಾರ್, 3 ಜನ ಪಿ. ಸಿ.ಗಳು ಮಾತ್ರ ಇದ್ದಾರೆ. ಅವರಿಂದ ಯಾವುದೇ ಕೆಲಸವನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ. ಆ ದೃಷ್ಟಿಯಲ್ಲಿ ಮಾನ್ಯ ಗೃಹ ಮಂತ್ರಿಗಳು ಏನು 10 ಪೋಲೀಸ್ ಠಾಣೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ ಅದರಲ್ಲಿ ನಮ್ಮ ಮಾಯಸಂದ್ರ ಹೋಬಳಿಗೆ ದಯಮಾಡಿ ಒಂದು ಮೇಲ್ದರ್ಜೆಯ ಪೋಲೀಸ್ ಠಾಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಆ ತಾಲ್ಲೂಕಿನಲ್ಲಿ ಎರಡು ಪೋಲೀಸ್ ಠಾಣೆಗಳು ಇವೆ. ಆದರೆ ನಮ್ಮ ನಾರ್ಮ್ಸ್ ಪ್ರಕಾರ ಈಗ 81 ಸಾವಿರ, 214 ಜನಸಂಖ್ಯೆಗೆ ಒಂದು ಪೋಲೀಸ್ ಠಾಣೆ ಇದೆ. ಇನ್ನೊಂದು ಪೋಲೀಸ್ ಠಾಣೆಯನ್ನು ನಾವು ಮಂಜೂರು ಮಾಡ ಬೇಕಾದರೆ ನಮ್ಮ ನಾರ್ಮ್ಸ್ ಪ್ರಕಾರ ಆಗುವುದಿಲ್ಲ. ಈಗ ಪೋಲೀಸ್ ಠಾಣೆಗಳ ಬೇಡಿಕೆ ಎಲ್ಲಾ ಕಡೆ ಇದೆ. ನಮ್ಮಲ್ಲಿ ಬೇಡಿಕೆ ಇರುವುದು ಈಗಾಗಲೇ ಸುಮಾರು 78 ಕಡೆ ಇದೆ. ಎಲ್ಲಾ ಕಡೆ ಏಕಕಾಲಕ್ಕೆ ಕೊಡುವುದಕ್ಕೆ ಆಗುವುದಿಲ್ಲ. ಇದನ್ನು ಪರಿಶೀಲನೆ ಮಾಡಿ ಹಂತಹಂತವಾಗಿ ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ಕೊಡತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ.

ರಾಜ್ಯದ ತಲಾ ಆದಾಯದ ಬಗ್ಗೆ

353 (3220) ಶ್ರೀ ರಾಜುಗೌಡ ಜಿ. (ಹನ್ನೂರು): ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1997-98ರಲ್ಲಿ ತಲಾದಾಯಎಷ್ಟು ಇದ್ದಿತು?

ಆ) ಹಿಂದಿನ ದಶಕದಲ್ಲಿ ತಲಾದಾಯ ಎಷ್ಟುಇದ್ದಿತು?

ಇ) ಇದು ರಾಷ್ಟ್ರೀಯ ಸರಾಸರಿ ಆದಾಯಕ್ಕಿಂತ ಎಷ್ಟು ಹೆಚ್ಚು ಅಥವಾ ಕಡಿಮೆ ಆಗಿದೆ 1997-98ರ ತಲಾದಾಯಕ್ಕಿಂತ?

ಈ) ತಲಾದಾಯವನ್ನು ರಾಷ್ಟ್ರೀಯ ಸರಾಸರಿ ಆದಾಯಕ್ಕಿಂತ ಹೆಚ್ಚು ಮಾಡಲು ಕೈ ಗೊಂಡಿರುವ ಕ್ರಮಗಳೇನು?

ಶ್ರೀ ಮತಿ ಸುಮಾ ವಸಂತ (ಯೋಜನಾ ರಾಜ್ಯ ಸಚಿವರು) :

ಅ) ಆಧಾರ ವರ್ಷ 1980-81

1997-98ರಲ್ಲಿ ಕರ್ನಾಟಕರಾಜ್ಯದಲ್ಲಿನ ತಲಾವಾರು ಆದಾಯವುಪ್ರಸಕ್ತ ಬೆಲೆಗಳಲ್ಲಿ 11693ರೂ.ಗಳುಹಾಗೂ ಸ್ಥಿರ (1980-81) ಬೆಲೆಗಳಲ್ಲಿ 2761 ರೂ. ಗಳಾಗಿತು.

ಆಧಾರ ವರ್ಷ 1993-94

1993-94ರ ಹೊಸ ಶ್ರೇಣಿಯ ಪ್ರಕಾರ 1997-98ರಲ್ಲಿ ಕರ್ನಾಟಕ ರಾಜ್ಯದ ತಲಾದಾಯವು ಪ್ರಸಕ್ತ ಬೆಲೆಗಳಲ್ಲಿ 13621 ರೂ.ಗಳು ಹಾಗೂ ಸ್ಥಿರ (1993-94) ಬೆಲೆಗಳಲ್ಲಿ 10,200 ರೂ.ಗಳಾಗಿತ್ತು.

ಆ) ಹಿಂದಿನ ದಶಕದಲ್ಲಿದ್ದ ತಲಾವಾರು ಆದಾಯದ ವಿವರಗಳನುನ (1987-88 ರಿಂದ 1996-97ರ) ವರೆಗೆ ಈ ಕೆಳಗೆ ಕೊಡಲಾಗಿದೆ.

ವರ್ಷ	ತಲಾದಾಯ (ರೂ.ಗಳಲ್ಲಿ)	
	ಪ್ರಸಕ್ತ ಬೆಲೆಗಳಲ್ಲಿ	ಸ್ಥಿರ (1980-81) ಬೆಲೆಗಳಲ್ಲಿ
1987-88	3158	1853
1988-89	3620	1978
1989-90	4044	2056
1990-91	4598	2039
1991-92	5889	2262
1992-93	6321	2278
1993-94	7242	2410
1994-95	8504	2485
1995-96	9359	2558
1996-97	10504	2668

ಇ) 1997-98 ಸಾಲಿಗೆ ರಾಷ್ಟ್ರೀಯ ಸರಾಸರಿ ತಲಾದಾಯವು ಪ್ರಸಕ್ತ ಬೆಲೆಗಳಲ್ಲಿ 12,729 ರೂ ಹಾಗೂ ಸ್ಥಿರ (1993-94) ಬೆಲೆಗಳಲ್ಲಿ 9271 ರೂ. ಆಗಿದ್ದು ಪ್ರಸಕ್ತ ಬೆಲೆಗಳಲ್ಲಿ 892 ರೂ. (7%) ಹೆಚ್ಚಿಗೆ ಹಾಗೂ ಸ್ಥಿರ (1993-94) ಬೆಲೆಗಳಲ್ಲಿ 929 ರೂ. (10%) ಹೆಚ್ಚಿಗೆ ಇರುವುದು ಕಂಡುಬಂದಿದೆ.

ಈ) ರಾಜ್ಯದ ತಲಾದಾಯವು ರಾಷ್ಟ್ರದ ತಲಾದಾಯಕ್ಕಿಂತ ಈಗಾಗಲೇ ಹೆಚ್ಚಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಜುಗಾಡ : ಮಾನ್ಯ ಅಧ್ಯಕ್ಷರೇ, 1997-98ನೇ ಸಾಲಿನಲ್ಲಿ ರಾಷ್ಟ್ರೀಯ ಸರಾಸರಿ ತಲಾದಾಯ 12,729 ರೂಪಾಯಿಗಳು, ಅದೇ ವರ್ಷಕ್ಕೆ ರಾಜ್ಯದ ತಲಾದಾಯ ಹೋಲಿಸಿದಾಗ 11,693 ರೂಪಾಯಿಗಳು ಆಗುತ್ತದೆ. ಪ್ರತಿ ತಲೆಗೂ ಸಹ 1036 ರೂಪಾಯಿಗಳಷ್ಟು ಆದಾಯ ಕಡಿಮೆ ಆಗಿದೆ. ಇದಕ್ಕೆ ಕಾರಣವೇನು ಎಂಬುದನ್ನು ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಸುಮಾ ವಸಂತ್: ಮಾನ್ಯ ಅಧ್ಯಕ್ಷರೇ, 1997-98ನೇ ಸಾಲಿಗೆ ರಾಷ್ಟ್ರೀಯ ಸರಾಸರಿ ಆದಾಯ ಪ್ರಸಕ್ತ ಬೆಲೆಗಳಲ್ಲಿ 12,729 ರೂಪಾಯಿಗಳು ಹಾಗೂ ಸ್ಥಿರ ಆದಾಯ ಬೆಲೆಗಳಲ್ಲಿ 9,271 ರೂಪಾಯಿಗಳು ಆಗಿದ್ದು ಪ್ರಸಕ್ತ ದರಗಳಲ್ಲಿ 898 ರೂಪಾಯಿಗಳಿದ್ದು, ಅದು 7 ಪರ್ಸೆಂಟ್ ಹೆಚ್ಚಾಗಿದ್ದು ಹಾಗೂ ಸ್ಥಿರ ಆದಾಯ 1993-94ನೇ ಸಾಲಿನಲ್ಲಿ 929 ರೂಪಾಯಿ ಇದ್ದು, ಅಂದರೆ ಇದು 10 ಪರ್ಸೆಂಟ್‌ನಷ್ಟು ಹೆಚ್ಚಾಗಿದೆ. ಇದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಅದಲ್ಲ. ನಾನು ಕೇಳಿರತಕ್ಕಂಥಾದ್ದು ರಾಷ್ಟ್ರೀಯ ಸರಾಸರಿ ತಲಾದಾಯ ಅದನ್ನು ರಾಜ್ಯಕ್ಕೆ ಹೋಲಿಸಿದಾಗ 1036 ರೂಪಾಯಿಗಳಷ್ಟು ಆದಾಯ ಕಡಿಮೆಯಾಗುತ್ತದೆ. ಇದಕ್ಕೆ ಏನು ಕಾರಣ ಮತ್ತು ಆ ಸಾಲಿನಲ್ಲಿ ಅದನ್ನು ಹೆಚ್ಚು ಮಾಡುವುದಕ್ಕೆ ಏನು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ? ಮತ್ತು ಆ ಸಾಲಿನಲ್ಲಿ ಪಕ್ಕದ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ತಲಾವಾರು ಆದಾಯ ಏನು ಇದೆ ಎನ್ನತಕ್ಕಂಥ ಮಾಹಿತಿಯನ್ನು ಕೊಡುತ್ತೀರಾ?

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೇ, ಪಕ್ಕದ ರಾಜ್ಯದ ಮಾಹಿತಿಯನ್ನು ನಾನು ಮಾನ್ಯ ಸದಸ್ಯರಿಗೆ ಬೇಕಾದರೆ ತರಿಸಿ ಕೊಡುತ್ತೇನೆ. ಈ ಆದಾಯವನ್ನು ಹೆಚ್ಚಿಸುವುದಕ್ಕೆ ಉದ್ಯೋಗ ಸೃಷ್ಟಿ, ವ್ಯವಸಾಯ ಉತ್ಪಾದನೆ ಈ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ನಾವು ಹಮ್ಮಿ ಕೊಂಡಿದ್ದೇವೆ. ನೀರಾವರಿಗೆ ಹೆಚ್ಚು ಒತ್ತು ಕೊಟ್ಟು ಈ ಕೆಲಸ ಮಾಡುತ್ತಿದ್ದೇವೆ.

ಶ್ರೀ ಬಿ. ರಾಜುಗೌಡ : ಮಾನ್ಯ ಅಧ್ಯಕ್ಷರೇ, ಈ ಹಿಂದೆ ರಾಷ್ಟ್ರೀಯ ಸರಾಸರಿ ತಲಾದಾಯಕ್ಕಿಂತ ರಾಜ್ಯದ ತಲಾದಾಯ ಹೆಚ್ಚು ಇತ್ತು. ಈ ಸಾಲಿನಲ್ಲಿ ಅದು ಕಡಿಮೆಯಾಗಿದೆ. ಅದನ್ನು ಸರಿದೂಗಿಸಬೇಕಾದರೆ ರಾಜ್ಯದ ತಲಾದಾಯವನ್ನು ಹೆಚ್ಚು ಮಾಡಬೇಕಾಗುತ್ತದೆ. ಅದನ್ನು ಹೆಚ್ಚು ಮಾಡಲು ಸರ್ಕಾರ ನಿರ್ದಿಷ್ಟವಾಗಿ ಹಾಕಿಕೊಂಡಿರುವ ಕಾರ್ಯಕ್ರಮಗಳು ಏನು ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?

10.50 ಎ.ಎಂ.

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ತಿಳಿಸಿರುವಂತೆ ಆದಾಯವನ್ನು ಹೆಚ್ಚು ಮಾಡಲು ಸರಕಾರವು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಇಂಡಸ್ಟ್ರಿಯಲ್, ಅಗ್ರಿಕಲ್ಚರಲ್. ಎಂಪ್ಲಾಯ್‌ಮೆಂಟ್ ಮುಂತಾದ ವಲಯಗಳಲ್ಲಿ ಅವಕಾಶವನ್ನು ಕಲ್ಪಿಸಿ ಆದಾಯವನ್ನು ಹೆಚ್ಚು ಮಾಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ.

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ 354 ಪ್ರಶ್ನೆಗೆ ಉತ್ತರ ಕೊಡಲು ನಾನು ಸ್ವಲ್ಪ ಕಾಲಾವಕಾಶವನ್ನು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರಿಸಲು, ಕಾಲಾವಕಾಶವನ್ನು ಕೇಳಿಕೊಳ್ಳುತ್ತಿದ್ದಾರೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗಳಲ್ಲಿ ಇದು ಐದನೇ ಪ್ರಶ್ನೆಯಾಗಿದ್ದು, ಇದಕ್ಕೂ ಕೂಡ ಉತ್ತರ ಸಿಗಲಿಲ್ಲ. ಹಾಗಾದರೆ ಮುಂದೆ ಇದರ ವ್ಯವಸ್ಥೆ ಏನು?